

# ಪಕ್ವ ಅಹಂ – ಅಪಕ್ವ ಅಹಂ

ಡಾ. ಡಿ.ಕೆ. ರಾಜೇಂದ್ರ

ಜೀವಿಗಳಲ್ಲೆಲ್ಲ ಮಾನವನ ವಿಶಿಷ್ಟತೆಯನ್ನು ಗುರುತಿಸುವ ಒಂದು ಗುಣವೇ ಅವನ ಸ್ವಯಂಪ್ರಜ್ಞೆ ಅಥವಾ 'ನಾನು' ಎಂಬ ಭಾವವನ್ನು ಉಂಟುಮಾಡುವ 'ಅಹಂಕಾರ'. ಆದರೆ ಈ ಗುಣವು ಒಂದು ಮಿತಿಯನ್ನು ದಾಟಿ ಹೋದರೆ ತನ್ನೆಲ್ಲ ವಿಶೇಷತೆಯನ್ನೂ ಕಳೆದುಕೊಂಡು ನರಳಬೇಕಾದೀತು! ಈ ಕುರಿತು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ವಿವೇಚಿಸಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

ಅಹಂಕಾರ ಮನುಷ್ಯನಿಗೆ ತಗುಲಿದ ಒಂದು ದೊಡ್ಡ ವ್ಯಾಧಿ. ದೊಡ್ಡ ಪಿಡುಗು. ಕೆಲವೊಮ್ಮೆ ಅದೇ ಅವನ ಅಧಃಪತನಕ್ಕೂ ಹೆದ್ದಾರಿ. ಅದರ ಬೆನ್ನುಹತ್ತಿ ಹೊರಟವರು ಮತ್ತೆ ಅದರಿಂದ ಹಿಂದೆ ಸರಿದು ಹೋದದ್ದು ವಿರಳ. ಏಕೆಂದರೆ ಅದು ಅವನೇ ನೇಯ್ದು ಅಪ್ಪಿಕೊಂಡ ದೊಡ್ಡ ಬಲೆ. ರೇಷ್ಮೆ ಹುಳು ತನ್ನ ಗೂಡನ್ನು ತಾನೇ ಕಟ್ಟಿಕೊಂಡು ಅದರಲ್ಲಿ ತಾನೇ ತನ್ನ ಅಂತ್ಯವನ್ನು ಕಾಣುವಂತೆ ಮನುಷ್ಯ ಕೂಡ 'ಅಹಂ'ನ ಕೂಪದಲ್ಲಿ ಸಿಲುಕಿ ಅಂತ್ಯ ಕಾಣುವಂತಾಗುತ್ತದೆ. ಶ್ರೀರಾಮಕೃಷ್ಣರು 'ಅಹಂ' ಅನ್ನು 'ಮಾಯೆ' ಎಂದು ಕರೆದಿದ್ದಾರೆ. ಅದನ್ನು ಚೂರು ಮೋಡಕ್ಕೆ ಹೋಲಿಸಿ, ಅದು ಪಕ್ಕಕ್ಕೆ ಸರಿದಾಗಲೇ ವ್ಯಕ್ತಿಗೆ ಮುಕ್ತಿ ಎನ್ನುತ್ತಾರೆ. ಇದಕ್ಕೆಲ್ಲ ಮುಖ್ಯ ಕಾರಣವಾಗುವುದು ಮನುಷ್ಯನಲ್ಲಿರುವ ಸ್ವಪ್ರತಿಷ್ಠೆ, ತಾನೇ ಶ್ರೇಷ್ಠ ಎಂಬ ಭಾವನೆ, ತನ್ನಿಂದಲೇ ಎಲ್ಲವೂ ಎಂಬ ಗರ್ವ ಹಾಗೂ ತಾನಿಲ್ಲದೆ ಏನೂ ಇಲ್ಲ ಎಂಬ ಒಣ ಪ್ರತಿಷ್ಠೆ. ಒಮ್ಮೆ ಅದು ಹೆಗಲೇರಿದರೆ ಅದನ್ನು ಉಳಿಸಿಕೊಳ್ಳಲು ಆತ ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗುತ್ತದೆ. ಆ ಪ್ರಭಾವಳಿಯಲ್ಲಿಯೇ ತನ್ನ ಬದುಕನ್ನು ಕಟ್ಟಿಕೊಂಡು, ಆ ಒಂದು ಭ್ರಮೆಯಲ್ಲಿಯೇ ಜೀವಿಸತೊಡಗುತ್ತಾನೆ. ಅದಿಲ್ಲದೆ ತನ್ನ ಬದುಕಿಲ್ಲ ಎಂಬ ಸಂಕುಚಿತ ಭಾವನೆಗೆ ಒಳಗಾಗುತ್ತಾನೆ. ಇದಕ್ಕೆ ನಮ್ಮ ಇತಿಹಾಸ ಪುರಾಣಗಳಲ್ಲಿಯೇ ಸಾಕಷ್ಟು ಉದಾಹರಣೆಗಳಿವೆ. ರಾವಣನನ್ನು ಪ್ರಮುಖವಾಗಿ ಕಾಡಿದ್ದು ಈ 'ಅಹಂ'. ದುರ್ಯೋಧನನ ವಿನಾಶಕ್ಕೆ ಮೂಲವಾದದ್ದೂ ಈ 'ಅಹಂ'. ವಾಲಿ–ಸುಗ್ರೀವರ ಮಧ್ಯೆ ಅಡ್ಡವಾಗಿ ನಿಂತದ್ದೂ ಕೂಡ ಇದೇ 'ಅಹಂ'. ಇದೊಂದು ಇಲ್ಲವಾಗಿದ್ದಿದ್ದರೆ ಅಥವಾ ಪ್ರಮಾಣದಲ್ಲಿ ಸ್ವಲ್ಪ ವ್ಯತ್ಯಯವಿದ್ದಿದ್ದರೂ ರಾಮಾಯಣ–ಮಹಾಭಾರತದ ಕತೆಗಳ ಸ್ವರೂಪವೇ ಬೇರೆಯಾಗುತ್ತಿತ್ತೋ ಏನೋ! ಎಲ್ಲರ ದೃಷ್ಟಿಯಲ್ಲಿ ಅವರುಗಳ ವ್ಯಕ್ತಿತ್ವದ ಚಿತ್ರಣ ಬೇರೊಂದು ರೀತಿಯಲ್ಲಿಯೇ ಅನಾವರಣಗೊಳ್ಳುತ್ತಿತ್ತು.

ವಾಸ್ತವವಾಗಿ ನಮ್ಮಲ್ಲಿಯ ಜ್ಞಾನ, ಅರಿವು, ತಿಳಿವು, ಸ್ಥಾನಮಾನ ಹಾಗೂ ಆಸ್ತಿ–ಅಂತಸ್ತು ಮುಂತಾದವುಗಳು ನಮ್ಮಲ್ಲಿರುವ ಅಹಂಕಾರವನ್ನು ಇಲ್ಲವಾಗಿಸಿ – 'ನಾನೇನೇನೂ ಅಲ್ಲ, ಈ

ಪ್ರಪಂಚದಲ್ಲಿ ನನಗಿಂತ ಮಿಗಿಲಾದವರಿದ್ದಾರೆ, ನಾನು ತಿಳಿಯ ಬೇಕಾದದ್ದು ಇನ್ನೂ ಬಹಳಷ್ಟಿದೆ' ಎಂಬ ವಿನಯವಂತಿಕೆಯನ್ನು, ಅರಿವನ್ನು ಉಂಟುಮಾಡಬೇಕು. ಆದರೆ ಆಗುತ್ತಿರುವುದೇ ಬೇರೆ! ಅದೇ ದೊಡ್ಡ ದುರಂತ ಕೂಡ. ನಿಜದ ಸಂಗತಿ ಎಂದರೆ, ಅದನ್ನರಿತವರು ಮಹಾತ್ಮರಾಗುತ್ತಾರೆ, ಅರಿಯದವರು ಮೂರ್ಖರೆನಿಸುತ್ತಾರೆ. ಒಮ್ಮೆ ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯ ನೊಂದಿಗೆ ಮಾತನಾಡುತ್ತ: ''ಒಮ್ಮೊಮ್ಮೆ ನನಗೆ ಭಾವನೆ ಬರುತ್ತದೆ: ಇಷ್ಟೆಲ್ಲ ಜನರು ಇಲ್ಲಿಗೆ ಬರುವಂತೆ ಪ್ರೇರಣೆಯಾಗಲು ನನಗೇನು ಗೊತ್ತಿದೆ?'' ಎಂದರು. ವೈಷ್ಣವಚರಣ ಒಳ್ಳೆಯ ದೊಡ್ಡ ಪಂಡಿತ. ಆತ ಹೇಳುತ್ತಿದ್ದ, ''ನೀವು ಆಡುವ ಮಾತುಗಳನ್ನೆಲ್ಲ ಶಾಸ್ತ್ರಗಳಲ್ಲಿ ಕಾಣಬಹುದು. ಆದರೆ ನಾನೇಕೆ ಇಲ್ಲಿಗೆ ಬರುತ್ತಾ ಇದ್ದೇನೆ ಗೊತ್ತೆ? ಅದನ್ನು ನಿಮ್ಮ ಬಾಯಿಂದ ಕೇಳಲು ಬರುತ್ತಿದ್ದೇನೆ.''

ಇಲ್ಲಿ ಅವರಿಬ್ಬರ ವಿನಯ, ವಿದ್ವತ್ತು, ಮುಗ್ಧತೆ ಹಾಗೂ ಅರಿವಿನ ದಾಹ ಪ್ರಕಾಶಗೊಳ್ಳುತ್ತದೆ. ಪರಸ್ಪರ ಪ್ರೀತಿ-ಗೌರವ ಭಾವನೆ ಇರುವಲ್ಲಿ ಮಾತ್ರ ಇದು ಸಾಧ್ಯ. ಇಲ್ಲಿ ಇಬ್ಬರೂ ಅವರವರ ಕ್ಷೇತ್ರದಲ್ಲಿ ದೊಡ್ಡವರೇ. ಸಾಧಕರೇ. ಒಬ್ಬರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಹಾತ್ಮರೆನಿಸಿದರೆ ಮತ್ತೊಬ್ಬರು ತಮ್ಮ ವಿದ್ವತ್ ಕ್ಷೇತ್ರದಲ್ಲಿ ಅಷ್ಟೇ ದೊಡ್ಡ ಜ್ಞಾನಿಗಳು. ಆದರೆ ಇಬ್ಬರಲ್ಲಿಯೂ ಆ 'ಅಹಂ' ಕೊಂಚವೂ ಸುಳಿದಾಡಿಲ್ಲ. ಶ್ರೀರಾಮಕೃಷ್ಣರು ಗ್ರಂಥದಿಂದ ಏನನ್ನೂ ಓದದೆಯೇ ತಮ್ಮ ಜ್ಞಾನ ಚಕ್ಷುವಿನಿಂದ ಎಲ್ಲವನ್ನೂ ತಿಳಿದವರು; ವೈಷ್ಣವಚರಣ ಶಾಸ್ತ್ರಗ್ರಂಥಗಳ ಮೂಲಕ ಎಲ್ಲವನ್ನೂ ಅರಿತಿದ್ದರೂ ಶ್ರೀರಾಮಕೃಷ್ಣರ ಬಾಯಲ್ಲಿ ಅದರ ಹೊಸ ರೂಪವನ್ನು, ಅರ್ಥವನ್ನು ದೃಷ್ಟಾಂತಗಳ ಮೂಲಕ ಕೇಳಿ ಅದಕ್ಕೆ ಬೆರಗಾದವನು. ಅಹಂ ಅಡ್ಡಿಯಾಗದಿದ್ದಾಗ ಇಂತಹುದೆಲ್ಲಾ ಸಾಧ್ಯ. ಅವರೇ ಒಂದು ಕಡೆ ಹೇಳುತ್ತಾರೆ: ''**ಅಹಂಕಾರವು ಸತ್ತಿತೆಂದರೆ ಎಲ್ಲ ಕಷ್ಟ ಪರಿಹಾರವಾದಂತೆ; ಮತ್ತು ಅಹಂಕಾರ ಇರುವವರೆಗೆ ಮನುಷ್ಯ ಜ್ಞಾನವನ್ನಾಗಲಿ ಮುಕ್ತಿಯನ್ನಾಗಲಿ ಪಡೆಯಲಾರ.**'' ಮನುಷ್ಯತ್ವ ಮೂಡುವುದು 'ಅಹಂ' ಅಳಿದಾಗ, ವಿನಯ ಅರಳಿದಾಗ.

ದಾಸೋಹವನ್ನು ಕುರಿತಂತೆ ಸಿದ್ಧರಾಮೇಶ್ವರನ ವಚನವೊಂದು ಹೀಗಿದೆ:

**ಸೋಽಹಂ ಎಂಬುದು ಅಂತರಂಗದ ಮದ**
**ಶಿವೋಽಹಂ ಎಂಬುದು ಬಹಿರಂಗದ ಮದ**
**ಈ ದ್ವಂದ್ವವನಳಿದು ದಾಸೋಽಹಂ ಎನಿಸಯ್ಯ**

'ಮದ' ಕೂಡ 'ಅಹಂ'ನ ಪ್ರತಿರೂಪ. ಅದರ ರೂಪಗಳೂ ಹಲವು. ಅಂತಹ ಬಹುರೂಪಗಳನ್ನು ಇಲ್ಲವಾಗಿಸಿ ಪರಿಶುದ್ಧವಾದ ಒಂದು ಸ್ಥಿತಿಗೆ ತಲುಪಿದಾಗ ಈ ಭಿನ್ನ ಭೇದಗಳು ಇಲ್ಲವಾಗಲು ಸಾಧ್ಯ. ಸಿದ್ಧರಾಮೇಶ್ವರ ಅದಕ್ಕಾಗಿ ಪ್ರಾರ್ಥಿಸುತ್ತಾನೆ. ದಾಸೋಹಕ್ಕೂ ದಾನ ಮಾಡುವುದಕ್ಕೂ ವ್ಯತ್ಯಾಸವಿದೆ. ಕೊಡುವವರ (ದಾನಿಗಳ) ಕೈ ಯಾವಾಗಲೂ ಮೇಲಾಗಿರುತ್ತದೆ. ತಾನು ತನ್ನದು ಎಂಬ 'ಅಹಂ' ಅದರಲ್ಲಿ ತುಂಬಿರುತ್ತದೆ. ಆದರೆ ದಾಸೋಹದಲ್ಲಿ ಅದು ಇರುವುದಿಲ್ಲ. ಅಹಂ ಅಳಿದಾಗಲೇ ನಿಜವಾದ ದಾಸೋಹ ಸಾಧ್ಯ. ಅದಕ್ಕೆ ಭಕ್ತಿ, ಬದ್ಧತೆ, ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ ಎಲ್ಲವೂ ಬೇಕಾಗುತ್ತದೆ. ನಾನು, ನನ್ನದು ಎಂಬ 'ಅಹಂ' ಅಳಿದಾಗಲೇ ನೀನು, ನಿನ್ನದು ಎಂಬ ತ್ಯಾಗ ಮನೋಭಾವ ಅಂಕುರಿಸಲು ಸಾಧ್ಯ.

### ಅಹಂಕಾರ : ಅದೊಂದು ಕಡಿವಾಣ

ಅಹಂಕಾರ, ಮನುಷ್ಯನ ಪಾಲಿಗೆ ಅದೊಂದು ಕಡಿವಾಣವಿದ್ದಂತೆ. ಲಗಾಮಿನಂತೆ ಕೆಲಸಮಾಡುತ್ತದೆ. ಅವನ ಸ್ವಾತಂತ್ರ್ಯಹರಣಕ್ಕೂ ಅದೇ ಕಾರಣವಾಗುತ್ತದೆ. ವ್ಯಕ್ತಿತ್ವದಲ್ಲಿನ ದ್ವಂದ್ವಕ್ಕೆ ಅದೇ ಸ್ಫೂರ್ತಿ. ನಮ್ಮಿಂದ ಮಾಡಬಾರದ್ದನ್ನು ಮಾಡಿಸಲೂ ಅದೇ ಪ್ರೇರಣೆ. ನಮ್ಮ ಪುರಾಣ ಪುಣ್ಯಕತೆಗಳಲ್ಲಿ ಬರುವ ಅನೇಕ ನಾಯಕರು ಇದಕ್ಕೆ ನಿದರ್ಶನ. ತಮ್ಮ ಮನಸ್ಸಿಗೆ ತಾವೇ ವಿರುದ್ಧವಾಗಿ ನಡೆದುಕೊಳ್ಳುವ ಪರಿಸ್ಥಿತಿಗೂ ಅದು ತಳ್ಳುತ್ತದೆ. ಜಾರಿಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಭಂಡತನಕ್ಕೂ ದೂಡಬಲ್ಲದು! ಒಮ್ಮೆ ಅಹಂನ್ನು ಹೆಗಲೇರಿಸಿಕೊಂಡ ವ್ಯಕ್ತಿ ಅದರ ದಾಸನಾಗುತ್ತಾನೆ. ಸರಿ-ತಪ್ಪುಗಳ ವಿವೇಚನೆ ಅವನಿಂದ ಸಂಪೂರ್ಣ ದೂರ ಸರಿದಿರುತ್ತದೆ. 'ತನ್ನದೇ ಸರಿ, ತಾನೇ ಸರಿ' ಎಂಬ ದಿಟ್ಟ ನಿರ್ಧಾರದಲ್ಲಿ ಭಂಡತನದಲ್ಲಿ ಅವನನ್ನು ಬಂಧಿಸಿ ಅದರಿಂದ ಹೊರಬರದಂತೆ ಮಾಡುತ್ತದೆ. ಪ್ರೀತಿ, ಪ್ರೇಮ, ವಿಶ್ವಾಸ, ತಾಳ್ಮೆ, ಬಂಧ, ಸರಳತೆ ಮುಂತಾದ ಪದಗಳ ಅರ್ಥವೇ ತಿಳಿಯದೆ ತನ್ನದೇ ಲೋಕದಲ್ಲಿ ಆತ ಬದುಕುವಂತಾಗುತ್ತಾನೆ. ಆಧ್ಯಾತ್ಮಿಕ ಸಾಧಕರಿಗೂ, ಜ್ಞಾನಿಗಳೆನಿಸಿದವರಿಗೂ ಇದು ತಪ್ಪಿದ್ದಲ್ಲ.

ಇವೆಲ್ಲವನ್ನೂ ಹೋಗಲಾಡಿಸಿಕೊಳ್ಳಲು ಹೆಚ್ಚು ಶ್ರಮಪಡಬೇಕಾಗುತ್ತದೆ. '**ನೀನಿಳಿವ ಪಥವೇ-ನಾನರಿವ ಪಥ**'-ಆಧ್ಯಾತ್ಮಿಕ ಅರಿವು ಇದಕ್ಕೆಲ್ಲ ಮದ್ದು. ನಾನು ನನ್ನದು ಮುಂತಾದ ಧೋರಣೆಗಳನ್ನು ಹೊರದೂಡದ ಹೊರತು ನಿಜವಾದ ಅರಿವು, ಜ್ಞಾನ ದೂರದ ಮಾತು. ರಾಮಕೃಷ್ಣರು ಹೇಳುವುದು ಹೀಗೆ: ''ಅಹಂ ಎಂಬುದು ಇರುವವರೆಗೆ ಬ್ರಹ್ಮಜ್ಞಾನ ಉಂಟಾಗದು. ಬ್ರಹ್ಮಜ್ಞಾನ ದೊರೆತ ನಂತರ ಭಗವಂತನ ದರ್ಶನ ದೊರೆತನಂತರ 'ಅಹಂ' ಎಂಬುದು ನಾವು ಹೇಳಿದ ಹಾಗೆ ಕೇಳುತ್ತದೆ. ಇಲ್ಲದಿದ್ದರೆ ಅದು ಹಾಗೆ ಮಾಡದು. ನಾವೇ ನಮ್ಮ ನೆರಳನ್ನು ಹಿಡಿಯಲಾಗುವುದಿಲ್ಲ. ಆದರೆ ಸೂರ್ಯ ನೆತ್ತಿಯ ಮೇಲಕ್ಕೆ ಬಂದಾಗ ಅರ್ಧಮೊಳದ ಒಳಗೇ ಅದು ಇರುತ್ತದೆ.''

ಲೌಕಿಕ ಪ್ರಪಂಚದಲ್ಲಾಗಲೀ, ಆಧ್ಯಾತ್ಮಿಕ ಲೋಕದಲ್ಲಾಗಲೀ ಅಹಂನ್ನು ಹೋಗಲಾಡಿಸಲು ಇರುವುದು ಒಂದೇ ಮಂತ್ರ, ಸೂತ್ರ-ಅದು ನಿಜವಾದ ಜ್ಞಾನ. ವಾಸ್ತವದ ಅರಿವು. ಸತ್ಯದ ತಿಳಿವು. ಒಂದು ರೀತಿಯಲ್ಲಿ ಇದಕ್ಕೆಲ್ಲ ಕಾರಣವಾಗುವುದು ಮನಸ್ಸೇ. ಅದನ್ನು ನಿಯಂತ್ರಿಸುವ ಶಕ್ತಿಯುಂಟಾದರೆ ಎಲ್ಲ ಸಮಸ್ಯೆ

ಗಳಿಗೂ ಉತ್ತರ ದೊರೆಯುತ್ತದೆ. ರಾಮಕೃಷ್ಣರು ಮನಸ್ಸನ್ನು ಅಗಸನ ಮನೆಯ ಬಟ್ಟೆಗೆ ಹೋಲಿಸುತ್ತಾರೆ. ''ಮನಸ್ಸೆಂಬುದು ಅಗಸನ ಮನೆಯ ಬಟ್ಟೆಯ ಹಾಗೆ. ಅದನ್ನು ಯಾವ ಬಣ್ಣದಲ್ಲಿ ಅದ್ದುತ್ತೇವೆಯೋ, ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ.'' ಆದ್ದರಿಂದ ಮನಸ್ಸಿನ ನಿಯಂತ್ರಣ ಮುಖ್ಯ. ಒಂದು ಬಗೆಯ ಅಜ್ಞಾನ, ಪ್ರತಿಷ್ಠೆ ಅಹಂಗೆ ಕಾರಣ. ಅವೆರಡನ್ನೂ ನಿವಾರಿಸಲು ಜ್ಞಾನದ ಮೊರೆ ಹೊಗಬೇಕಾಗುತ್ತದೆ. ''ಮರಕ್ಕಿಂತ ಮರ ದೊಡ್ಡದು'' ಎಂಬ ವಿಶಾಲ ಭಾವನೆಯ ಅರ್ಥವನ್ನು ತಿಳಿದು ಬದುಕನ್ನು ನಡೆಸಿದಾಗ 'ಅಹಂ' ದೂರವಾಗುತ್ತದೆ. ಜ್ಞಾನದ ಬೆಳವಣಿಗೆ ಹೆಚ್ಚಾದಂತೆ ನಮ್ಮಲ್ಲಿಯ ಅಜ್ಞಾನ ಹೊರಹೊಮ್ಮುತ್ತದೆ. ಅರಿವು ಹೆಚ್ಚಾಗುತ್ತದೆ. ಶ್ರೀರಾಮಕೃಷ್ಣರಿಗೆ ಒಮ್ಮೆ ಮಾಸ್ಟರ್ ಮಹಾಶಯ ಹೇಳಿದ: ''ಜ್ಞಾನ ಒಂದು ವಿಧದಲ್ಲಿ ನಮಗೆ ಉಪಕಾರ ಮಾಡುತ್ತದೆ; ಅದು ನಮಗೇನೂ ಗೊತ್ತಿಲ್ಲ, ನಾವು ಏನೂ ಅಲ್ಲ ಎಂಬ ಬೋಧನೆಯನ್ನು ತರುತ್ತದೆ.'' ಅದಕ್ಕೆ ಒಪ್ಪಿ ಮೆಚ್ಚುಗೆ ಸೂಚಿಸಿ ಶ್ರೀರಾಮಕೃಷ್ಣರು, ''ಹೌದು, ಅದು ಸಾಧ್ಯ'' ಎನ್ನುತ್ತಾರೆ. ಅಜ್ಞಾನ ನಿಂತ ನೀರಿನಂತಾದರೆ, ಜ್ಞಾನ ಹರಿವ ನೀರಿನಂತೆ. ಬದಲಾವಣೆಗೆ ಅದು ಕಾರಣವಾಗುತ್ತದೆ. ಅಜ್ಞಾನದಿಂದ ಅಹಂಗೆ ಒಳಗಾದ ವ್ಯಕ್ತಿ ಜ್ಞಾನದ ಬೆಳಕಿನಿಂದಾಗಿ ಹೊರಬರಲು ಸಾಧ್ಯ. ಆದರೆ ಸತತ ಪ್ರಯತ್ನ ಅಗತ್ಯ.

ಮನುಷ್ಯ ತನ್ನಲ್ಲಿಯ ಅಜ್ಞಾನದ ಅಥವಾ ಅರಿವಿನ ಅಭಾವದ ಕಾರಣದಿಂದ ಕೆಲವೊಂದು ವಿಷಯಗಳಲ್ಲಿ ತಾನೇ ಸರಿ, ತನ್ನದೇ ಸರಿ ಎಂಬ ನಿರ್ಧಾರಕ್ಕೆ ಬರುವುದುಂಟು. ಅವನಲ್ಲಿಯ ಅಹಂ, ಸರಿ-ತಪ್ಪುಗಳ ವಿವೇಚನೆಗೆ ತೊಡಗಲೂ ಇಚ್ಛಿಸುವುದಿಲ್ಲ. ಆದರೆ ಒಂದು ಬಗೆಯ ಸ್ಥಿತಿ ಒದಗಿಬಂದಾಗ ಆತ ಆ ಸುಳಿಯಿಂದ ಹೊರಬಂದುಬಿಡುತ್ತಾನೆ. ರಾಮಕೃಷ್ಣರು ಅಂತಹ ಒಂದು ಘಟನೆಯನ್ನು ನಿದರ್ಶನವಾಗಿ ಕೊಡುತ್ತಾರೆ: ''ಒಬ್ಬ ಪಂಡಿತನಿಗೆ ಅಹಂಕಾರ ಬಹಳ ಜಾಸ್ತಿ. ಭಗವಂತನಿಗೆ ರೂಪವಿದೆಯೆಂಬುದನ್ನು ಆತ ಒಪ್ಪುತ್ತಿರಲಿಲ್ಲ. ಆದರೆ ಭಗವಂತನ ಕಾರ್ಯವನ್ನು ಯಾರು ತಾನೆ ಅರಿಯಬಲ್ಲರು? ಭಗವಂತ ಆದ್ಯಾಶಕ್ತಿರೂಪದಲ್ಲಿ ಆತನಿಗೆ ಕಾಣಿಸಿಕೊಂಡ. ಪಂಡಿತ ಬಹಳ ಹೊತ್ತಿನವರೆಗೆ ಬಾಹ್ಯಪ್ರಜ್ಞೆಯೇ ಇಲ್ಲದವನಾಗಿ ಬಿದ್ದಿರಬೇಕಾಯಿತು. ಕಿಂಚಿತ್ ಪ್ರಜ್ಞೆ ಬಂದ ನಂತರ ಕೇವಲ ''ಕಾ! ಕಾ! ಕಾ!'' ಅಂತ ಹೇಳಲಾರಂಭಿಸಿದ. ಆತನ ಕೈಯಲ್ಲಿ 'ಕಾಳಿ' ಎಂಬ ಪದವನ್ನು ಪೂರ್ಣವಾಗಿ ಉಚ್ಚರಿಸಲೂ ಸಾಧ್ಯವಾಗಲಿಲ್ಲ. ನಿಜ ಸ್ವರೂಪದ ಅರಿವಾದಾಗ ಅಹಂ ತಾನೇ ತಾನಾಗಿ ದೂರಸರಿಯುತ್ತದೆ.''

### ಪಕ್ವ ಅಹಂ-ಅಪಕ್ವ ಅಹಂ

ಅಹಂನಲ್ಲಿಯೂ ಎರಡು ವಿಧ ಎನ್ನುತ್ತಾರೆ ಶ್ರೀರಾಮಕೃಷ್ಣರು: **ಪಕ್ವ ಅಹಂ-ಅಪಕ್ವ ಅಹಂ.** ಪಕ್ವ ಅಹಂ ಬೇಕಾಗುತ್ತದೆ, ಆದರೆ ಅಪಕ್ವ ಅಹಂ ಅಲ್ಲ. 'ಅಪಕ್ವ ಅಹಂ' ಅಪಾಯಕಾರಿ. ಅದರಿಂದ ಯಾರಿಗೂ ಯಾವ ಪ್ರಯೋಜನವೂ ಆಗುವುದಿಲ್ಲ. ರಾಮಕೃಷ್ಣರು ಅವುಗಳ ವ್ಯತ್ಯಾಸವನ್ನು ವಿವರಿಸಿರುವುದು ಹೀಗೆ: 'ನಾನು ದಳಪತಿ, ನಾನು ಈ ಸಮಾಜ ಕಟ್ಟಿದ್ದೇನೆ, ನಾನು ಲೋಕಶಿಕ್ಷಣ ಮಾಡುತ್ತಿದ್ದೇನೆ' ಎಂಬ ಅಹಂ ಅಪಕ್ವ ಅಹಂ. ಧರ್ಮಪ್ರಚಾರ ಬಹಳ ಕಠಿಣವಾದ ಕೆಲಸ. ಭಗವಂತನ ಆಜ್ಞೆಯಿಲ್ಲದಿದ್ದರೆ ಅದು ನಡೆಯುವ ಹಾಗಿಲ್ಲ. ಆತನ ಆದೇಶ ಬೇಕೇಬೇಕು. ಪ್ರವಚನ ಮಾಡಬೇಕೆಂದು ಶುಕದೇವನಿಗೆ ಆದೇಶವಾಗಿತ್ತು. ಭಗವಂತನ ಸಾಕ್ಷಾತ್ಕಾರ ದೊರೆತ ನಂತರ, ಆದೇಶ ದೊರೆತು, ಮನುಷ್ಯ ಧರ್ಮಪ್ರಚಾರಕನೋ ಲೋಕಶಿಕ್ಷಕನೋ ಆಗುವುದಾದರೆ ಅದರಿಂದ ಯಾವ ಹಾನಿಯೂ ಉಂಟಾಗದು. ಆತನ 'ಅಹಂ' 'ಅಪಕ್ವ ಅಹಂ' ಅಲ್ಲ , 'ಪಕ್ವ ಅಹಂ'. ಶುಕದೇವನಿಗೆ ಪೂರ್ಣ ಬ್ರಹ್ಮಜ್ಞಾನ ದೊರೆಯದೆ ಹೋದುದು ಅವನು 'ವಿದ್ಯಾ ಅಹಂ' ನೊಂದಿಗೆ ಲೋಕಶಿಕ್ಷಣಕ್ಕೆ ತೊಡಗಲಿ ಎಂಬ ಕಾರಣದಿಂದ ಎನ್ನುತ್ತಾರೆ ರಾಮಕೃಷ್ಣರು. 'ಪಕ್ವ ಅಹಂ' ಸಮಾಜ ಕಂಟಕವಲ್ಲ , ಅದು ಅದಕ್ಕೆ ಪೂರಕ. ಆದರೆ ಅದು ಕಾರ್ಯರೂಪದಲ್ಲಿ ಉಳಿಯಬೇಕಲ್ಲದೆ ತಲೆಗೆ ಏರಬಾರದು. ಶಂಕರಾಚಾರ್ಯರು ಲೋಕಶಿಕ್ಷಣಕ್ಕಾಗಿ 'ವಿದ್ಯಾ ಅಹಂ' ಇಟ್ಟುಕೊಂಡಿದ್ದರು ಎನ್ನುತ್ತಾರೆ ರಾಮಕೃಷ್ಣರು.

ಅಹಂಕಾರ ದ್ವಿಮುಖಿಯಾದದ್ದು ಎನ್ನುತ್ತಾರೆ ಸ್ವಾಮಿ ನಿತ್ಯಸ್ಥಾನಂದರು: ಅವರ ಪ್ರಕಾರ ಒಂದು ಸ್ವೀಕರಣ ರೂಪದ್ದು, ಮತ್ತೊಂದು ತಿರಸ್ಕರಣ ರೂಪದ್ದು. ಮೊದಲನೆಯದು ತನ್ನ 'ಅಹಂ'ನ್ನು ಉಳಿಸಿ ಬೆಳೆಸಿಕೊಳ್ಳಲು ಎಲ್ಲವನ್ನೂ ಬಯಸುತ್ತದೆ. ಆದರೆ ಮತ್ತೊಂದು ಅದಕ್ಕೆ ವಿರುದ್ಧವಾಗಿ ತಿರಸ್ಕರಣರೂಪವನ್ನು ತಾಳುತ್ತದೆ. ವೈರಾಗ್ಯ ಮನೋಭಾವಕ್ಕೆ ಒಳಗಾಗುತ್ತದೆ. ಪಕ್ವ ಅಹಂ ಅನ್ನು ಪ್ರದರ್ಶಿಸುವುದರ ಕಡೆಗೇ ಅದರ ಒಲವು. ಒಳಿತನ್ನು ಪ್ರೀತಿಸುವ, ಗೌರವಿಸಿ, ಸ್ವಾಗತಿಸಿ, ಸ್ವೀಕರಿಸುವ ಗುಣ ಇದರದ್ದಾಗಿರುತ್ತದೆ. ಒಳಿತು-ಕೆಡುಕಿನ ವಿವೇಚನೆ ಅಲ್ಲಿ ಗೋಚರಿಸುವುದುಂಟು. ಆಗ ಅಲ್ಲಿ ಅಹಂ ಇಲ್ಲವಾಗಿ ಕೇವಲ ವಿವೇಕ ಮಾತ್ರ ಕೆಲಸಮಾಡುತ್ತದೆ. ನೈತಿಕತೆಯ ಗುಣವಿಶೇಷಗಳು ಅಲ್ಲಿ ಗಮನ ಸೆಳೆಯುತ್ತವೆ.

ಅಹಂ ಎಲ್ಲರಲ್ಲಿಯೂ ಒಂದೇ ಪ್ರಮಾಣದಲ್ಲಿರುವುದಿಲ್ಲ. ಕೆಲವರಲ್ಲಿ ಅದು ಸದಾಕಾಲ ಎಚ್ಚೆತ್ತಿರುವುದುಂಟು. ಮತ್ತೆ ಕೆಲವೊಂದು ಸಂದರ್ಭಗಳಲ್ಲಿ ಹೆಡೆಯಾಡುವುದನ್ನು ಕಾಣಬಹುದು. ಇನ್ನು ಕೆಲವರಲ್ಲಿ ಸಂಚಾರಿಯ ಗುಣವನ್ನು ಪಡೆದಿರುವುದೂ ಉಂಟು. ಅಂತೂ ಅದರ ಅವತಾರ ನಾನಾ ತರಹ! ಯಾವುದೇ ಅಪಕ್ವ ಅಹಂ ಒಳ್ಳೆಯದಲ್ಲ. ಅದು ಒಂಟೆ ತಲೆಹಾಕಿದಂತೆ! ಒಮ್ಮೆ ಒಳಗೆ ಪ್ರವೇಶಿಸಿದರೆ ಅದರಿಂದ ಪಾರಾಗುವುದು ಕಷ್ಟ. ಅದು ಒಂದು ರೀತಿ ವ್ಯಕ್ತಿತ್ವಕ್ಕೆ ಮಸಿ ಬಳಿದಂತೆ! ರಾಮಕೃಷ್ಣರು ಸುಂದರವಾದ ಒಂದು ಒಳ್ಳೆಯ ಉಪಮೆಯೊಂದಿಗೆ ಅದನ್ನು ವಿವರಿಸುವುದು ಹೀಗೆ: ''ಬೇಕಾದಷ್ಟು ವಿಚಾರದಲ್ಲಿ ತೊಡಗು, 'ಅಹಂ' ಎಂಬುದು ಹೋಗುವುದಿಲ್ಲ. 'ಅಹಂ' ಎಂಬುದೇ ಕುಂಭ,

ಬ್ರಹ್ಮನೇ ಎಲ್ಲೆಲ್ಲೂ ನೀರೇ ನೀರಾಗಿರುವ ಸಮುದ್ರ ಅಂತಿಟ್ಟುಕೊ. ಕುಂಭದ ಒಳಗೂ ಹೊರಗೂ ನೀರು ತುಂಬಿದೆ. ಎಲ್ಲೆಲ್ಲೂ ಬರೀ ನೀರೇ ನೀರು; ಆದರೂ ಕುಂಭ ಎಂಬುದು ಮಾತ್ರ ಇದ್ದೇ ಇರುತ್ತದೆ. ಈ ಕುಂಭವೇ ಭಕ್ತನ 'ಅಹಂ' ಎಂಬುದರ ಸ್ವರೂಪ. ಎಲ್ಲಿಯವರೆಗೆ ಕುಂಭ ಎಂಬುದು ಇರುವುದೊ, ಅಲ್ಲಿಯವರೆಗೆ 'ನಾನು', 'ನೀನು', ಎಂಬುದು ಇದ್ದೇ ಇರುತ್ತದೆ. ನೀನು ಪ್ರಭು, ನಾನು ದಾಸ. ನೀನು ಭಗವಂತ, ನಾನು ಭಕ್ತ ಎಂಬುವೂ ಇದ್ದೇ ಇರುತ್ತದೆ. ಬೇಕಾದಷ್ಟು ವಿಚಾರದಲ್ಲಿ ತೊಡಗು, ಇದು ಹೋಗತಕ್ಕದ್ದಲ್ಲ. ಕುಂಭವೇ ಹೋಗಿಬಿಟ್ಟಿತು ಅಂದರೆ ಆಗ ಅದು ಬೇರೆ ಸಮಾಚಾರ.''

'ಅಹಂ'ನ್ನು ಇಳಿಸಲು, ತಗ್ಗಿಸಲು, ಹೋಗಲಾಡಿಸಲು ಸಾಧ್ಯವಾಗಬಹುದಾದದ್ದು ಇತಿಹಾಸದ ಅರಿವು. ಹಿಂದೆ ಅದನ್ನೇ ಮನೆದೇವರಂತಾಗಿಸಿಕೊಂಡು ಬದುಕಲೆಣಿಸಿ ಸೋತು ಇತಿಹಾಸದ ಪುಟ ಸೇರಿದವರದು ದುರಂತ ಕಥೆಗಳು. ಇಲ್ಲವಾದರೆ ಸ್ವಾಮಿ ವಿವೇಕಾನಂದರು ಹೇಳುವಂತೆ: ''ಯಾವನಾದರೂ ಮನುಷ್ಯನ ಗುಣಲಕ್ಷಣವನ್ನು ನೀವು ನಿಜವಾಗಿಯೂ ಪರೀಕ್ಷೆ ಮಾಡಲು ಬಯಸಿದರೆ, ಆತನು ಮಾಡುವ ದೊಡ್ಡ ಕಾರ್ಯಗಳತ್ತ ನೋಡಬೇಡಿರಿ. ಒಬ್ಬ ಮೂರ್ಖನೂ ಕೂಡ ಎಂದಾದರೂ ಒಂದು ಸಮಯದಲ್ಲಿ ಮಹಾವ್ಯಕ್ತಿಯಾಗಬಹುದು. ಓರ್ವನು ಮಾಡುವ ಸಾಮಾನ್ಯ ಕಾರ್ಯಗಳನ್ನು ಗಮನಿಸಿರಿ. ಅವುಗಳು ಮಹಾಪುರುಷನೊಬ್ಬನ ನಿಜವಾದ ಗುಣಶೀಲವನ್ನು ಪರಿಚಯಿಸುತ್ತವೆ.'' ಇಂತಹ ಮನೋಭಾವ, ದೃಷ್ಟಿ ಕೂಡ ಸಹಕಾರಿಯಾಗುವುದು. ಮಹಾತ್ಮರ, ದೊಡ್ಡ ದೊಡ್ಡ ಸಾಧಕರ, ಇತಿಹಾಸ ಪುರುಷರ ಚರಿತ್ರೆಯ ಅಭ್ಯಾಸ ನಮ್ಮಲ್ಲಿಯ 'ಅಹಂ' ಅನ್ನು ತಗ್ಗಿಸಲು ಸಹಾಯವಾಗುತ್ತವೆ.

'ಅಹಂ'ಗೆ ಸಂಬಂಧಿಸಿದಂತೆ ಮಾಸ್ಟರ್ ಮಹಾಶಯನು ಶ್ರೀರಾಮಕೃಷ್ಣರೊಂದಿಗೆ ಹಂಚಿಕೊಂಡ ಘಟನೆಯೊಂದು ಹೀಗಿದೆ. ಅದು ಸಾಕ್ರೆಟೀಸ್ ಜೀವನದಲ್ಲಿ ನಡೆದ ಒಂದು ಘಟನೆ:

ಗ್ರೀಸ್ ದೇಶದಲ್ಲಿ ಸಾಕ್ರೆಟೀಸ್ ಎಂಬ ಹೆಸರಿನ ಒಬ್ಬ ಮನುಷ್ಯನಿದ್ದ. ದೈವವಾಣಿಯಾಯಿತು, ಮನುಷ್ಯರಲ್ಲೆಲ್ಲಾ ಆತನೊಬ್ಬನೇ ಜ್ಞಾನಿ ಎಂಬುದಾಗಿ. ಇದನ್ನು ಕೇಳಿ ಸಾಕ್ರೆಟೀಸ್ ಆಶ್ಚರ್ಯಚಕಿತನಾದ. ಆತ ಏಕಾಂತದಲ್ಲಿ ಬಹಳ ಕಾಲ ಧ್ಯಾನದಲ್ಲಿ ತೊಡಗಿ, ದೈವವಾಣಿ ಹೇಳಿದುದರ ಇಂಗಿತವೇನೆಂಬುದನ್ನು ಅರಿತುಕೊಂಡ. ಬಳಿಕ ಆತ ತನ್ನ ಸ್ನೇಹಿತರಿಗೆ ತಿಳಿಸಿದ: 'ಕೇವಲ ನಾನೊಬ್ಬನೇ ಅರಿತುಕೊಂಡಿದ್ದೇನೆ ನನಗೇನೂ ಗೊತ್ತಿಲ್ಲ' ಎಂಬುದನ್ನು. ಆದರೆ ಪ್ರತಿಯೊಬ್ಬನೂ ಭಾವಿಸುತ್ತಾನೆ, ತಾನು ಬುದ್ಧಿವಂತ ಎಂಬುದಾಗಿ. ಪ್ರಸ್ತುತ, ಎಲ್ಲರೂ ಅಜ್ಞಾನಿಗಳೇ.'

ಶ್ರೀರಾಮಕೃಷ್ಣರು ಅದನ್ನು ಅನುಮೋದಿಸುತ್ತಾರೆ. ತನ್ನ ತಾನರಿವುದೇ ನಿಜವಾದ ಜ್ಞಾನ, ಜ್ಞಾನಿ. ಅದು ತಲೆಗೇರಿದಾಗ ಅಜ್ಞಾನಿ. ಆಗ 'ಅಹಂ' ಅವನ ಕಣ್ಣು-ಮನಸ್ಸು ಎರಡಕ್ಕೂ ಅಡ್ಡವಾಗುತ್ತದೆ. ಅದನ್ನೆಲ್ಲ ಮರೆಯಾಗಿಸಲು ಅಧ್ಯಾತ್ಮದ, ನೈತಿಕತೆಯ ಹಾಗೂ ನಿಜವಾದ ಅರಿವಿನ ಅಗತ್ಯವಿರುತ್ತದೆ. ✽

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಜಪ ಮಾಡುತ್ತ ಮಾಡುತ್ತ ಮನಸ್ಸು ಅದರಲ್ಲೇ ಮಗ್ನವಾಗುವುದಿಲ್ಲ ಏಕೆ?

**ಶ್ರೀಮಾತೆ :** ಜಪ ಮಾಡುತ್ತ ಮಾಡುತ್ತ ಮನಸ್ಸು ಅದರಲ್ಲೇ ಮಗ್ನವಾಗುವುದು. ಮನಸ್ಸು ತಲ್ಲೀನವಾಗದಿದ್ದರೂ ಜಪ ಮಾಡುವುದನ್ನು ಬಿಡಬಾರದು. ನಿನ್ನ ಕೆಲಸ ನೀನು ಮಾಡುತ್ತ ಹೋಗು. ನಾಮಜಪ ಮಾಡುತ್ತ ಮನಸ್ಸು ತಾನಾಗಿಯೇ ಸ್ಥಿರವಾಗುವುದು – ಗಾಳಿಯಿಲ್ಲದ ಪ್ರದೇಶದಲ್ಲಿ ಇಟ್ಟ ದೀಪದ ಜ್ವಾಲೆಯಂತೆ. ಗಾಳಿಯಿರುವಲ್ಲಿ ದೀಪದ ಜ್ವಾಲೆ ಸ್ಥಿರವಾಗಿ ಇರಲಾಗದು. ಅದೇ ರೀತಿ ಮನಸ್ಸೂ ಕೂಡ ವಾಸನೆಗಳಿಂದ ಕೂಡಿದ್ದರೆ ಸ್ಥಿರವಾಗದು. ಮಂತ್ರದ ಉಚ್ಚಾರಣೆ ಸರಿಯಾಗಿ ಮಾಡದಿದ್ದರೆ ಅದು ಫಲ ಕೊಡುವುದು ವಿಳಂಬವಾಗುವುದು. ಒಬ್ಬಾಕೆಗೆ 'ರುಕ್ಮಿಣೀ– ನಾಥಾಯ' ಎಂಬ ಮಂತ್ರದ ಉಪದೇಶವಾಗಿತ್ತು. ಆಕೆ 'ರುಕು', 'ರುಕು' ಎಂದು ಜಪಿಸುತ್ತಿದ್ದಳು. ಅದರಿಂದಾಗಿ ಅವಳ ಪ್ರಗತಿ ಕುಂಠಿತವಾಯಿತು. ಅನಂತರ ಅವಳು ಭಗವಂತನ ಕೃಪೆಯಿಂದಾಗಿ ಸರಿಯಾದ ಮಂತ್ರ ಜಪಿಸುವಂತಾಯಿತು.

**ಶಿಷ್ಯ :** ಕೆಲವು ದಿನಗಳಿಂದ ನಾನು ಆಸನಗಳನ್ನು ಅಭ್ಯಾಸ ಮಾಡುತ್ತಿದ್ದೇನೆ, ಶರೀರ ಚೆನ್ನಾಗಿ ಇಟ್ಟುಕೊಳ್ಳುವುದಕ್ಕಾಗಿ. ಈ ಯೋಗಾಸನಗಳ ಅಭ್ಯಾಸದಿಂದ ಆಹಾರ ಚೆನ್ನಾಗಿ ಜೀರ್ಣವಾಗುತ್ತಿದೆ ಹಾಗೂ ಬ್ರಹ್ಮಚರ್ಯ ಪಾಲನೆಗೆ ಅದು ನೆರವಾಗುತ್ತಿದೆ.

**ಶ್ರೀಮಾತೆ :** ಹೆಚ್ಚಾಗಿ ಮಾಡಿದರೆ ಮನಸ್ಸು ದೇಹದ ಕಡೆಗೇ ಹೋಗಬಹುದು. ಅದೇ ರೀತಿ ಇವನ್ನೆಲ್ಲ ನಿಲ್ಲಿಸಿಬಿಟ್ಟರೆ ದೇಹಾರೋಗ್ಯ ಕೆಡುವುದು. ಇದನ್ನು ಗಮನದಲ್ಲಿಟ್ಟುಕೊಂಡು ಏನು ಮಾಡುತ್ತೀಯೋ ಮಾಡು.

*('ಶ್ರೀಶಾರದಾದೇವಿ ವಚನವೇದ', ಪು.೩೨೪-೨೫)*